**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2021-22ನೇ ಸಾಲಿನ 15ನೇ ಹಣಕಾಸು ಆಯೋಗದ ಎರಡನೇ ಕಂತಿನ ನಿರ್ಬಂಧಿತ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಮಾರ್ಗಸೂಚಿ ಸಂಖ್ಯೆ:ಗ್ರಾಅಪಂರಾ 191 ಜಿಪಸ 2020, ದಿನಾಂಕ:13-05-2020.
2. ಸರ್ಕಾರದ ಸೇರ್ಪಡೆ ಮಾರ್ಗಸೂಚಿ ಸಂಖ್ಯೆ:ಗ್ರಾಅಪಂರಾ 191 ಜಿಪಸ 2020, ದಿನಾಂಕ:30-05-2020, 05-10-2020, 22-01-2021 ಹಾಗೂ 17-11-2021.
3. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪಂರಾ 263 ಜಿಪಸ 2021, ದಿನಾಂಕ:06-07-2021.
4. ಭಾರತ ಸರ್ಕಾರದ ವಿತ್ತ ಮಂತ್ರಾಲಯ, ವೆಚ್ಚ ಇಲಾಖೆ, ಆರ್ಥಿಕ ಆಯೋಗ ವಿಭಾಗದ ಪತ್ರ ಸಂ.ಎಫ್.15(4)ಎಫ್‌ಸಿ-XV/ಎಫ್‌ಸಿಡಿ/2020-25, ದಿನಾಂಕ:30-03-2022.
5. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂಖ್ಯೆ:ಎಫ್‌ಡಿ 26 ಬಿಜಿಎಲ್ 2021, ದಿನಾಂಕ: 04-04-2022.

**ಪ್ರಸ್ತಾವನೆ:**

2021-22ನೇ ಸಾಲಿನಲ್ಲಿ 15ನೇ ಹಣಕಾಸು ಆಯೋಗದಡಿ ಒಟ್ಟು **ರೂ.237700.00** ಲಕ್ಷಗಳ ಅನುದಾನವನ್ನು ಭಾರತ ಸರ್ಕಾರವು ನಿಗಧಿಪಡಿಸಿದ್ದು, ಪ್ರಸ್ತುತ ಆರ್ಥಿಕ ವರ್ಷದ ಆಯವ್ಯಯದಲ್ಲಿ ಜಿಲ್ಲಾ ಪಂಚಾಯತ್‌ಗಳಿಗೆ ಲೆಕ್ಕ ಶೀರ್ಷಿಕೆ:2515-00-196-6-12ರಡಿ ರೂ.11885.00 ಲಕ್ಷಗಳು, ತಾಲ್ಲೂಕು ಪಂಚಾಯತಿಗಳಿಗೆ ಲೆಕ್ಕ ಶೀರ್ಷಿಕೆ: 2515-00-197-6-12ರಡಿ ರೂ.23770.00ಲಕ್ಷಗಳು ಹಾಗೂ ಗ್ರಾಮ ಪಂಚಾಯತ್‌ಗಳಿಗೆ ಲೆಕ್ಕ ಶೀರ್ಷಿಕೆ:2515-00-198-6-13ರಡಿ ರೂ.202045.00ಲಕ್ಷಗಳನ್ನು ಹಂಚಿಕೆ ಮಾಡಿರುತ್ತದೆ.

ಮೇಲೆ ಓದಲಾದ (4)ರ ಪತ್ರದನ್ವಯ ಭಾರತ ಸರ್ಕಾರವು 2021-22ನೇ ಸಾಲಿನಲ್ಲಿ 15ನೇ ಹಣಕಾಸು ಆಯೋಗದಡಿ ನಿರ್ಬಂಧಿತ ಅನುದಾನದ ಎರಡನೇ ಕಂತು ರೂ.71310.00ಲಕ್ಷಗಳನ್ನು ಬಿಡುಗಡೆಗೊಳಿಸಿರುತ್ತದೆ.

ಮೇಲೆ ಓದಲಾದ(5)ರ ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರದನ್ವಯ 2021-22ನೇ ಸಾಲಿನ 15ನೇ ಹಣಕಾಸು ಆಯೋಗದ ನಿರ್ಬಂಧಿತ ಅನುದಾನದ ಎರಡನೇ ಕಂತು ರೂ.71310.00 (ಎಪ್ಪತ್ತೊಂದು ಸಾವಿರದ ಮೂರು ನೂರ ಹತ್ತು ಲಕ್ಷ ರೂಪಾಯಿಗಳು ಮಾತ್ರ)ಲಕ್ಷಗಳು ರಾಜ್ಯದ ಬೊಕ್ಕಸಕ್ಕೆ ಜಮೆಯಾಗಿರುವ ಕುರಿತು ದೃಢೀಕರಣವನ್ನು ನೀಡಿರುತ್ತದೆ.

15ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ 2021-22ನೇ ಸಾಲಿನ ನಿರ್ಬಂಧಿತ ಅನುದಾನದ ಎರಡನೇ ಕಂತು ರೂ.71310.00(ಎಪ್ಪತ್ತೊಂದು ಸಾವಿರದ ಮೂರು ನೂರ ಹತ್ತು ಲಕ್ಷ ರೂಪಾಯಿಗಳು ಮಾತ್ರ)ಲಕ್ಷಗಳನ್ನು ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳಾದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಅನುಕ್ರಮವಾಗಿ 5:10:85ರ ಅನುಪಾತದಲ್ಲಿ ಬಿಡುಗಡೆ ಮಾಡಬೇಕಾಗಿರುತ್ತದೆ.

ಅದರಂತೆ, ಮೇಲೆ ಓದಲಾದ (1), (2) ಮಾರ್ಗಸೂಚಿ ಹಾಗೂ (3)ರ ಸುತ್ತೋಲೆಯನ್ವಯ 31 ಜಿಲ್ಲಾ ಪಂಚಾಯತಿಗಳಿಗೆ ರೂ.3565.50ಲಕ್ಷಗಳು, 229 ತಾಲ್ಲೂಕು ಪಂಚಾಯತಿಗಳಿಗೆ ರೂ.7131.00ಲಕ್ಷಗಳು ಹಾಗೂ 5962 ಗ್ರಾಮ ಪಂಚಾಯತಿಗಳಿಗೆ ರೂ.60613.50ಲಕ್ಷಗಳನ್ನು ಖಜಾನೆ-2ರ ಮುಖಾಂತರ ನೇರವಾಗಿ ಸಂಬಂಧಪಟ್ಟ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿಗಳ ಬ್ಯಾಂಕ್ ಖಾತೆಗಳಿಗೆ ಬಿಡುಗಡೆಗೊಳಿಸಲು ನಿರ್ಧರಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 240 ಜಿಪಸ 2021, ದಿನಾಂಕ:07-04-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ 15ನೇ ಹಣಕಾಸು ಆಯೋಗದಡಿ ಬಿಡುಗಡೆ ಮಾಡಿರುವ ಎರಡನೇ ಕಂತಿನ ನಿರ್ಬಂಧಿತ ಅನುದಾನ ರೂ.71310.00(ಎಪ್ಪತ್ತೊಂದು ಸಾವಿರದ ಮೂರು ನೂರ ಹತ್ತು ಲಕ್ಷ ರೂಪಾಯಿಗಳು ಮಾತ್ರ)ಲಕ್ಷಗಳನ್ನು 5:10:85ರ ಅನುಪಾತದಂತೆ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳಾದ 31 ಜಿಲ್ಲಾ ಪಂಚಾಯತಿಗಳಿಗೆ ರೂ.3565.50ಲಕ್ಷಗಳು (ಅನುಬಂಧ-I), 229 ತಾಲ್ಲೂಕು ಪಂಚಾಯತಿಗಳಿಗೆ ರೂ.7131.00ಲಕ್ಷಗಳು (ಅನುಬಂಧ-II) ಹಾಗೂ 5962 ಗ್ರಾಮ ಪಂಚಾಯತಿಗಳಿಗೆ ರೂ.60613.50ಲಕ್ಷಗಳ (ಅನುಬಂಧ-III)ನ್ನು ಸಂಬಂಧಪಟ್ಟ ಬ್ಯಾಂಕ್‌ಗಳ ಖಾತೆಗಳಿಗೆ ಖಜಾನೆ-2ರ ಮೂಲಕ ಬಿಡುಗಡೆಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2021, ದಿನಾಂಕ: 31-12-2021ರಲ್ಲಿ ಸಂಬಂಧಿಸಿದ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿರವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎಂ.ಎಂ.ರಾಜು 7/4/22

**(ಎಂ.ಎಂ.ರಾಜು)**

ಸರ್ಕಾರದ ಅಧೀನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

07/04/22

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, (ಪಿ.ಬಿ.ನಂ.5329) ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು.

5. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
7. ಉಪ ನಿರ್ದೇಶಕರು, ಎನ್.ಎಂ.ಸಿ. ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
8. ಮುಖ್ಯ ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ, ಕರ್ನಾಟಕ ವಿಕಾಸ – ಪತ್ರಿಕೆಯಲ್ಲಿ ಪ್ರಕಟಿಸಲು.
9. ನಿರ್ದೇಶಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ – ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
10. ಶಾಖಾ ರಕ್ಷಾ ಕಡತ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಹಿರಿಯ ಆಪ್ತ ಕಾರ್ಯದರ್ಶಿ.
5. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಿ &ಆರ್) ರವರ ಆಪ್ತ ಕಾರ್ಯದರ್ಶಿಗಳು.
6. ಸರ್ಕಾರದ ಉಪ ಕಾರ್ಯದರ್ಶಿ (ಆರ್ಥಿಕ ಆಯೋಗ ಕೋಶ), 4ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ರವರ ಆಪ್ತ ಸಹಾಯಕ.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕ.
8. ಸರ್ಕಾರದ ಜಂಟಿ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕ.
9. ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕ.